5111 (5748) ಶ್ರೀ ಧರ್ಮೇಗೌಡ ಎಸ್. ಎಲ್. (ಬೀರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೆಲುಗುಗೌಡ ಜನಾಂಗದವರು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರುವುದು ನಿಜವೆ;

ಆ) ಹಾಗಿದ್ದಲ್ಲಿ ಈ ಜನಾಂಗದವರನ್ನು ಯಾವ ಯಾವ ಜಿಲ್ಲೆಗಳಲ್ಲಿ ಮೀಸಲಾತಿ ವ್ಯಾಪ್ತಿಯಲ್ಲಿ ಗುರುತಿಸಲಾಗಿದೆ;

ಇ) ಹಾಗಿದ್ದಲ್ಲಿ ಇವರು ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯದಲ್ಲಿ ಮೀಸಲಾತಿ ಪಡೆಯಲು ಅರ್ಹರೆ;

ಈ) ಹಾಗಿದ್ದಲ್ಲಿ ತೆಲುಗುಗೌಡ ಜನಾಂಗದವರನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಅಂತಿಮವಾಗಿ ಯಾವಾಗ ಸೇರಿಸಲಾಗುವುದು?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ತೆಲುಗುಗೌಡ ಜಾತಿಯನ್ನು ಹಿಂದುಳಿದ ಪ್ರವರ್ಗ–1ರ ಕ್ರಮ ಸಂಖ್ಯೆ 86 (ಡಬ್ಲ್ಯು)ರಲ್ಲಿ ಸೇರಿಸಲಾಗಿದೆ.

ಆ) ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ತೆಲುಗುಗೌಡ ಜನಾಂಗದವರನ್ನು ಪ್ರವರ್ಗ–1 ರಡಿ ಗೊಲ್ಲ ಜಾತಿಗೆ ಉಪಜಾತಿಯಾಗಿ ದಿನಾಂಕ: 30–03–2002ರ ಆದೇಶದಲ್ಲಿ ಸೇರಿಸಲಾಗಿದೆ.

ಇ) ಹಾಲಿ ಜಾರಿಯಲ್ಲಿರುವ ದಿನಾಂಕ: 30–03–2002ರ ಸರ್ಕಾರದ ಆದೇಶದ ಅನ್ವಯ ಈ ಜನಾಂಗದವರು, ಶಿಕ್ಷಣ ಹಾಗೂ ಉದ್ಯೋಗಕ್ಕೆ ಮಾತ್ರ ಮೀಸಲಾತಿಗೆ ಅರ್ಹರು, ರಾಜಕೀಯ ಮೀಸಲಾತಿ ವಿಷಯವು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

5112 (5989) ಶ್ರೀ ಧರ್ಮೇಗೌಡ ಎಸ್. ಎಲ್. (ಬೀರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದಡಿ ಮೂರು ವರ್ಷದಿಂದ ಅಂತರ್‌ಜಾತಿ ವಿವಾಹವಾದ ದಂಪತಿಗಳಿಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತಿದೆ? (ವರ್ಷಾವಾರು ವಿವರ ನೀಡುವುದು)

ಆ) ಇದುವರೆವಿಗೆ ಎಷ್ಟು ದಂಪತಿಗಳಿಗೆ ಧನ ಸಹಾಯ ಮಾಡಲಾಗಿದೆ?

ಇ) ಎಷ್ಟು ದಂಪತಿಗಳಿಗೆ ಧನಸಹಾಯವನ್ನು ನೀಡಲು ಬಾಕಿ ಇದೆ; (ವಿವರ ಒದಗಿಸುವುದು)

ಈ) ಈ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದಡಿ ಮೂರು ವರ್ಷದಿಂದ ಅಂತರ್‌ಜಾತಿ ವಿವಾಹವಾದ ದಂಪತಿಗಳಿಗೆ ಸರ್ಕಾರ ಬಿಡುಗಡೆ ಮಾಡಿದ ವಿವರ:

ಕ್ರ. ಸಂ.	ವರ್ಷ	ಬಿಡುಗಡೆಯಾದ ಹಣ(ಲಕ್ಷಗಳಲ್ಲಿ) ರೂ.	ಅಂತರ್‌ಜಾತಿ ವಿವಾಹವಾದ ದಂಪತಿಗಳ ಸಂಖ್ಯೆ
1	2002–03	10.25	41 ದಂಪತಿಗಳು
2	2003–04	3.70	15 ದಂಪತಿಗಳು
3	2004–05	19.50	77 ದಂಪತಿಗಳು
		33.45	**133**

ಇ) ಅಂತರ್ ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ಬಾಕಿ ವಿವರ ಅನುಬಂಧ ಲಗತ್ತಿಸಿದೆ.

ಈ) ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ವಿಧಾನಸಭಾ ಸದಸ್ಯರಾದ ಶ್ರೀ. ಧರ್ಮೇಗೌಡ. ಎಸ್. ಎಲ್. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 5989ಕ್ಕೆ ಅನುಬಂಧ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಂತರ್‌ಜಾತಿ ವಿವಾಹವಾದ ದಂಪತಿಗಳ ವಿವರ

ಕ್ರ.ಸಂ.	ದಂಪತಿಗಳ ಹೆಸರು ಮತ್ತು ವಿಳಾಸ	ಜಾತಿ
1.	ಶ್ರೀನಿವಾಸ. ಬಿನ್. ಮರಿಯಪ್ಪ ಅಲ್ಲಂಪುರ, ಜ್ಯೋತಿ ಬಿನ್ ಅಪ್ಪೇಗೌಡ ಅಲ್ಲಂಪುರ	ಅ.ಕ. ಒಕ್ಕಲಿಗ
2.	ಚಂದ್ರ ಬಿನ್ ರಂಗಯ್ಯ ಹೇಮಾವತಿ ಡಾ: ಅಫ್:ಬಕ್ಕೇಗೌಡ ಹಂಟರಮಕ್ಕಿ, ಚಿಕ್ಕಮಗಳೂರು	ಅ.ಕ. ಕುರುಬ
3.	ಸುಬ್ರಾಯ ಬಿನ್ ಉಗ್ಗಪ್ಪ ಗೀತಾ ಬಿನ್ ಸುಬ್ರಾಯ ಚಂದ್ರವಳ್ಳಿ, ಬಿಜರ್ ಅಂಚೆ, ಮೂಡಿಗೆರೆ	ಅ.ಕ ಒಕ್ಕಲಿಗ
4.	ಲೋಕೇಶ್ ಬಿನ್ ಸಣ್ಣಪ್ಪ ಗೌರಿ ಡಾ: ಆಫ್:ಪುಟ್ಟಸ್ವಾಮಿ ಇಂದಾವರ ಅಂಚೆ, ಚಿಕ್ಕಮಗಳೂರು	ಕುರುಬ ಅ.ಕ
5.	ಎಸ್.ಎಸ್.ನಾಗೇಶ ಬಿನ್ ನಿಂಗಯ್ಯ ಶಿರಗೂರು, ಅವತಿ ಅಂಚೆ ಚಿಕ್ಕಮಗಳೂರು ಕೆ.ಎಸ್.ಗೀತಾ ಡಾ:ಆಫ್:ಶಿವಪ್ಪಗೌಡ ಶಿರಗೂರು, ಚಿಕ್ಕಮಗಳೂರು	ಅ.ಕ. ಒಕ್ಕಲಿಗ

ಕ್ರ.ಸಂ.	ದಂಪತಿಗಳ ಹೆಸರು ಮತ್ತು ವಿಳಾಸ	ಜಾತಿ
6.	ಧನುನಾಯಕ ಬಿನ್ ಗಂಗಾನಾಯಕ ತೇಗೂರು, ಚಿಕ್ಕಮಗಳೂರು ರೂಪಾ ವೈ:ಆಫ್:ಧನುನಾಯಕ ತೇಗೂರು, ಚಿಕ್ಕಮಗಳೂರು	ಲಂಬಾಣಿ ರಾಜಾ ಕ್ಷತ್ರಿಯ
7.	ಕುಮಾರಾಚಾರಿ ಬಿನ್ ತಂತ್ರಾಚಾರಿ ರೂಪ ಡಾ:ಆಫ್:ಕುಮಾರ, ಶಂಕರಪುರ 3ನೇ ಕ್ರಾಸ್, ಚಿಕ್ಕಮಗಳೂರು	ವಿಶ್ವಕರ್ಮ ಅ.ಕ
8.	ರಮೇಶ್ ಬಿನ್ ಸಣ್ಣಯ್ಯ ಪೂರ್ಣಿಮ ಡಾ:ಆಫ್:ಅಣ್ಣಪ್ಪ ಶೆಟ್ಟಿ ಹ್ಯಾರಂಜಿ, ಜೇನುಗಡ್ಡೆ ಅಂಚೆ, ಚಿಕ್ಕಮಗಳೂರು	ಅ.ಕ. ಕುಂಬಾರಶೆಟ್ಟಿ
9.	ಮುರುಳಿ ಬಿನ್ ಮುನಿಸ್ವಾಮಿ ಜ್ಯೋತಿ ಚಿತ್ರಮಂದಿರ ಹತ್ತಿರ, ಚಿಕ್ಕಮಗಳೂರು ಜಲಜಾಕ್ಷಿ.ಬಿ.ಹೆಚ್.ಡಾ:ಆಫ್:ಹಿರಣ್ಣಯ್ಯ ಬಿಳೇಕಲ್ಲು, ಚಿಕ್ಕಮಗಳೂರು	ತಮಿಳ್ ಗೌಂಡರ್
10.	ಹೆಚ್.ಲೋಕೇಶ ಬಿನ್.ಹನುಮಂತ ಬೋವಿ ಕಡೂರು ಶ್ರೀಮತಿ. ವಿನಯ. ಕೋಂ ಲೋಕೇಶ್	ಬೋವಿ ಒಕ್ಕಲಿಗ
11.	ಶಂಕ್ರನಾಯ್ಕ ಬಿನ್ ಚಂದ್ರನಾಯ್ಕ ಬುಕ್‌ಸಾಗರ, ಕಡೂರು ತಾಲ್ಲೂಕು ಶೈಲ ಬಿನ್. ಈಶ್ವರಪ್ಪ ದೊಡ್ಡಬುಕ್ಕಸಾಗರ, ಕಡೂರು ತಾಲ್ಲೂಕು	ಲಂಬಾಣಿ ಲಿಂಗಾಯತ
12.	ತಮ್ಮಯ್ಯ ಬಿನ್ ರಾಮಯ್ಯ ಶಂಕರಪುರ, ಅಣ್ಣಿಗೆರೆ ಅಂಚೆ, ಕಡೂರು ತಾ: ಸರೋಜ ಕೋಂ ತಮ್ಮಯ್ಯ ಶಂಕರಪುರ	ಕೊರಮ ಈಡಿಗ
13.	ಕೃಷ್ಣಮೂರ್ತಿ ಬಿನ್ ರಂಗಪ್ಪ ಲಕ್ಷ್ಮಿಪುರ, ಕಡೂರು ತಾಲ್ಲೂಕು ರತ್ನಬಾ, ಸಿಂಗಟಗೆರೆ	ಗಂಗಾಮತ ಲಂಬಾಣಿ
14.	ಎ. ದೇವರಾಜ ಬಿನ್ ಅಣ್ಣಪ್ಪ ನಾಯ್ಕ ಸುಮತಿ, ಹಳೆಹಟ್ಟಿ	ಲಂಬಾಣಿ ಬಿಳಿಮಗ್ಗ

ಕ್ರ.ಸಂ.	ದಂಪತಿಗಳ ಹೆಸರು ಮತ್ತು ವಿಳಾಸ	ಜಾತಿ
15.	ಮಂಜು ಬಿನ್ ಬಾಬು	ಅ.ಕ.
	ಶ್ರೀಮತಿ. ಪ್ರಮೀಳ ಡಾ:ಆಫ್:ನಿಂಗಪ್ಪ	ತಳವಾರ
	ಜಾರಕಲ್ಲು, ಎಸ್ಟೇಟ್, ಲಿಂಗಗಾರು ಅಂಚೆ	
	ಕೊಪ್ಪ ತಾಲ್ಲೂಕು	
16.	ಕೆ.ಎಸ್. ಶೇಖರ	ಅ.ಕ.
	ಕೆ.ಕೆ.ಆಶಾ, ಗೌರಿಗುಡ್ಡೆ,	ವಿಶ್ವಕರ್ಮ
	ಕೊಪ್ಪ ತಾಲ್ಲೂಕು	
17.	ಕೆ.ಎ. ಮಂಜುನಾಥ ಬಿನ್ ಬೈರಣ್ಣ	ಅ.ಕ.
	ಪವಿತ್ರ ಬಿನ್ ಶ್ರೀಧರಾಚಾರ್	ವಿಶ್ವಕರ್ಮ
	ಎಸ್.ಆರ್.ಪುರ	
18.	ಪಾಮ ಕುಟ್ಟಿ ಬಿನ್ ವೈಯಾಧಾರ	ಪುಲಯಾರ
	ಪುಷ್ಪ ಬಿನ್ ಭಾಸ್ಕರ್	ಪೂಜಾರಿ
19.	ಬಸವರಾಜಪ್ಪ	ಅ.ಕ.
	ಪುಷ್ಪಲತಾ, ನಾಗಮಂಗಲ	ಒಕ್ಕಲಿಗ
	ತರೀಕೆರೆ ತಾಲ್ಲೂಕು	
20.	ರವಿಕುಮಾರ	ಕೊರಮ
	ಯಶೋಧ ನಾಗಪ್ಪ ಕಾಲೋನಿ	ಕುರುಬ
	ತರೀಕೆರೆ ತಾಲ್ಲೂಕು	

5113 (5903) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಪ್ರಸಿದ್ಧ ಐತಿಹಾಸಿಕ ಸ್ಥಳದಿಂದ ಕೆಳದಿಯಲ್ಲಿ ವಸತಿ ಶಾಲೆ ತೆರೆಯುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ;

ಆ) ಇದ್ದಲ್ಲಿ ವಸತಿ ಶಾಲೆಗೆ ಮಂಜೂರಾದ ಹಣವೆಷ್ಟು;

ಇ) ಇದುವರೆಗೂ ವಸತಿಶಾಲೆ ತೆರೆಯದಿರಲು ಇರುವ ಅಡೆತಡೆಗಳೇನು;

ಈ) ಇಲ್ಲವಾದಲ್ಲಿ ಯಾವಾಗ ತೆರೆಯಲಾಗುವುದು? (ವಿವರ ನೀಡುವುದು)

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) 2005–06ನೇ ಸಾಲಿನಲ್ಲಿ 43 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಕೆಳದಿಯಲ್ಲಿ ವಸತಿ ಶಾಲೆ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ಇ) ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿ ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗುವುದು.

ಈ) ಉದ್ಭವಿಸುವುದಿಲ್ಲ.